ನವ ಸಾಂಸ್ಕೃತಿಕ ಕೇಂದ್ರದಿಂದ ಬಿಜಾಪುರ ಮುದ್ದೇಬಿಹಾಳ ಮುಖ್ಯ ರಸ್ತೆಯವರೆಗೆ ಒಂದು ಸಂಪರ್ಕ ರಸ್ತೆ ನಿರ್ಮಾಣ ಇದರಲ್ಲಿ 51 ಮನೆಗಳ ಹಾಗೂ ಖಾಲಿ ನಿವೇಶನಗಳ ಭೂಸ್ವಾಧೀನ ಹಿಂದೆ ನಿರ್ವಹಿತರಾಗುವ ಮನೆಗಳ ಮಾಲೀಕರಿಗೆ ನಿವೇಶನಗಳನ್ನು ಒದಗಿಸುವುದು ಮತ್ತು ಸಂಪರ್ಕ ರಸ್ತೆ ಕಲ್ಪಿಸಿಕೊಡುವುದು.

ಇ) ಈ ಮೇಲಿನ ಕಾಮಗಾರಿಗಳಿಗಾಗಿ ಅಂದಾಜು ರೂ. 3.00 ಕೋಟಿ ವೆಚ್ಚ ತಗಲುವುದು, ಇದುವರೆಗೆ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ.

1)	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ	ರೂ. 18.00 ಲಕ್ಷ
2)	ಲೋಕಸಭಾ ಸದಸ್ಯರ ವಂತಿಗೆ	ರೂ. 25.00 ಲಕ್ಷ
		ರೂ. 43.00 ಲಕ್ಷ

ಇನ್ನುಳಿದ ಹಣವನ್ನು ಮುಂಬರುವ ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾನ್ಯ ಶಾಸಕರ ನಿಧಿಯಿಂದ ಮಾನ್ಯ ಸಂಸದರ ನಿಧಿಯಿಂದ ಹಾಗೂ ಸಾರ್ವಜನಿಕರಿಂದ ವಂತಿಗೆಯ ರೂಪದಲ್ಲಿ ಪಡೆಯಲಾಗುವುದು.

ಈ) ಮೇಲಿನ ಕಾಮಗಾರಿಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು ಕೆಲಸ ಪ್ರಗತಿಯಲ್ಲಿದೆ. ಬಸವ ಸಾಂಸ್ಕೃತಿಕ ಕೇಂದ್ರ ಮತ್ತು ಕಟ್ಟಡದ ನೆಲ ಅಂತಸ್ತು ಪೂರ್ತಿಗೊಂಡಿದೆ. ಉಳಿದ ಕೆಲಸ ಪ್ರಗತಿಯಲ್ಲಿದೆ. ಶ್ರೀ ಬಸವೇಶ್ವರ ದೇವಾಲಯದ ಪಕ್ಕದಲ್ಲಿ ಉದ್ಯಾನವನ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಸಂಪನ್ಮೂಲಗಳು ಸಂಗ್ರಹಣೆಯನ್ನಾಧರಿಸಿ ಕಾಮಗಾರಿಗಳಲ್ಲಿ ಪ್ರಗತಿ ಸಾಧಿಸಲಾಗುವುದು. ಇದಕ್ಕೆ ನಿರ್ದಿಷ್ಟ ಕಾಲಮಿತಿ ಇರುವುದಿಲ್ಲ.

848(1458) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು–ಸೋಲಾಪುರ ರಸ್ತೆಯನ್ನು ರಷ್ಟ್ರೀಯ ಹೆದ್ದಾರಿ–13 ರನ್ನಾಗಿ ಎಂದು ಮಾರ್ಪಡಿಸಲಾಗಿದೆ;

ಆ) ಮೆಲ್ದರ್ಜೆಗೇರಿಸಿದ ಸಮಯದಿಂದ ಇಲ್ಲಿಯವರೆಗೆ ಎಷ್ಟು ಬಾರಿ ರಸ್ತೆಯನ್ನು ದುರಸ್ತಿಗೊಳಿಸಲಾಗಿದೆ;

ಇ) ಈ ರಾಷ್ಟ್ರೀಯ ಹೆದ್ದಾರಿಯ ಭಾಗವಾದ ಚಿತ್ರದುರ್ಗ ಬಿಜಾಪುರ ರಸ್ತೆಯು ಯಾವ ಸ್ಥಿತಿಯಲ್ಲಿದೆ;

ಈ) ಚಿತ್ರದುರ್ಗ ಬಿಜಾಪುರ ರಸ್ತೆಯ ಮೇಲೆ ಹೊಂಡಗಳು ಬಿದ್ದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಾದರೆ, ಇದನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮಂಗಳೂರು–ಸೋಲಾಪುರ ರಸ್ತೆಯನ್ನು ಎರಡು ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾರ್ಪಡಿಸಲಾಗಿದ್ದು ಅವುಗಳ ವಿವರ ಕೆಳಕಂಡಂತಿದೆ.

1) ಸೊಲ್ಲಾಪುರ–ಚಿತ್ರದುರ್ಗ ರಸ್ತೆಯನ್ನು 1960ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗಿದೆ.

2) ಚಿತ್ರದುರ್ಗ–ಮಂಗಳೂರು ರಸ್ತೆಯನ್ನು 1999ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿದೆ.

ಆ) ಮೇಲ್ದರ್ಜೆಗೇರಿಸಿದ ಸಮಯದಿಂದ ಇಲ್ಲಿಯವರೆಗೆ ನಿಯತ ಕಾಲಿಕವಾಗಿ ರಸ್ತೆಯನ್ನು ದುರಸ್ತಿಗೊಳಿಸಲಾಗಿದೆ.

ಇ) ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಈ) ಹೌದು.

ಉ) ಈ ಹೆದ್ದಾರಿಯಲ್ಲಿ ಮಳೆಗಾಲದಲ್ಲಿ ಬಿದ್ದಿರುವ ಗುಂಡಿಗಳನ್ನು ತುಂಬಲಾಗಿದೆ ಹಾಗೂ ಈ ರಸ್ತೆಯ ಮೇಲ್ಪದರವನ್ನು ಬಲಪಡಿಸುವ ಸುಧಾರಿಸುವ ದೃಷ್ಟಿಯಿಂದ ಅತಿ ಹೆಚ್ಚು ಹಾಳಾಗಿರುವ ರಸ್ತೆಗಳಿಗೆ ಪಿ.ಆರ್ : ಐಆರ್‌ಕ್ಯೂಪಿ ಅಂದಾಜುಗಳಿಗೆ ಕೇಂದ್ರ ಭೂಸಾರಿಗೆ ಸಚಿವಾಲಯದ ಅನುಮೋದನೆ ಪಡೆಯಲಾಗಿದೆ. ಈ ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಯೋಜಿಸಿ ಮಾರ್ಚ್ 2005 ಅಂತ್ಯದೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗುವುದು.

849(550) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾವೇರಿ ಜಿಲ್ಲೆಯನ್ನು ಪ್ರಸಕ್ತ ವರ್ಷವು ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರ ಸಾರಿ ವಿದ್ಯುತ್ ಬಾಕಿ ಉಳಿಸಿಕೊಂಡಿರುವ ರೈತರ ಪಂಪ್‌ಸೆಟ್‌ಗಳ ಸಂಪರ್ಕವನ್ನು ಹೆಸ್ಕಾಂ ಅಧಿಕಾರಿಗಳು ಕಿತ್ತು ಹಾಕುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದರೆ, ಸರ್ಕಾರದ ಕ್ರಮವೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ಬಂದಿದೆ. ಹಾವೇರಿ ಜಿಲ್ಲೆಯು ನೀರಾವರಿ ಪಂಪ್‌ಸೆಟ್ಟುದಾರರಿಂದ 31–12–2004ರ ಅಂತ್ಯದಲ್ಲಿದ್ದಂತೆ ಬರಬೇಕಾಗಿದ್ದ ಬಾಕಿ ರೂ. 16.58 ಕೋಟಿಗಳಾಗಿರುತ್ತದೆ. ಆದುದರಿಂದ ವಿದ್ಯುತ್ ಬಾಕಿ ವಸೂಲಿಗೆ ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಬಿಲ್ಲು ಪಾವತಿಸದ ರೈತರ ಪಂಪ್‌ಸೆಟ್‌ಗಳ ವಿದ್ಯುತ್ ನಿಲುಗಡೆಗೊಳಿಸುವುದು ಅನಿವಾರ್ಯವಾಗಿದೆ.

ಆ) ಪ್ರತಿ ಯೂನಿಟ್ ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ 3.73 ರೂ.ಗಳು. ಆದರೆ ಪಂಪ್‌ಸೆಟ್ ನವರು ಕೇವಲ 63 ಪೈಸೆಗಳನ್ನು ಒಂದು ಯೂನಿಟ್‌ಗೆ ಪಾವತಿಸುತ್ತಾರೆ. ಈ ಅತಿ ಕಡಿಮೆ ದರವನ್ನಾದರೂ ರೈತರು ತಪ್ಪದೆ ಪಾವತಿಸಬೇಕಾಗಿರುತ್ತದೆ. ವಿದ್ಯುತ್ ಕಂಪನಿಗಳು ಹಣ ಕಾಸಿನ ತೊಂದರೆಯಲ್ಲಿರುತ್ತವೆ. ಗ್ರಾಮಾಂತರ ಪ್ರದೇಶಗಳಿಗೆ ಈ ವರ್ಷ ಹೆಚ್ಚಿನ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸರ್ಕಾರದ ಸಬ್ಸಿಡಿ ಹಣದ ಬಿಡುಗಡೆ. ವಸೂಲಾತಿ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ ಆತರು ಸಹಕರಿಸಿ ಅವರ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿದರೆ, ವಿದ್ಯುತ್ ಕಂಪನಿಗಳು ಗ್ರಾಮಾಂತರ ಪ್ರದೇಶಗಳಿಗೆ ಇದೇ ರೀತಿಯ ಹೆಚ್ಚಿನ ವಿದ್ಯುತ್ ಕೊಡಲು ಸಾಧ್ಯವಾಗುತ್ತದೆ ರೈತರು ಕಂತುಗಳಲ್ಲಿ ಬಾಕಿಯನ್ನು ಪಾವತಿಸಲು ಮುಂದೆ ಬಂದಲ್ಲಿ, ಇದನ್ನು ಸಹಾನುಭೂತಿಯಿಂದ ಪರಿಗಣಿಸಲಾಗುವುದು.

850(551) ಶ್ರೀ ಶಿವರಾಜ ಸಜ್ಜನರ್ (ಹಾವೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2003 ಮಾರ್ಚ್‌ವರೆಗೆ ನೀರಾವರಿ ಪಂಪ್‌ಸೆಟ್ ಹೊಂದಿದ ರೈತರು ವಿದ್ಯುತ್ ಕಂಪನಿಗಳಿಗೆ ಪ್ರಾಮಾಣಿಕವಾಗಿ ಬಿಲ್ಲು ಪಾವತಿಸಿದ್ದು ನಿಜವೇ: